ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೆಳ್ತಂಗಡಿ

ಸಿ.ಸಿ. 852/2025

| | | |
|---|---|---|
| ಸಾಕ್ಷಿದಾರರ ಹೆಸರು | : ಮನೋಜ್ | |
| ತಂದೆಯ ಹೆಸರು | : ಉಮೇಶ್ ಮೆಂಡನ್ | ಡಿ.ಡಬ್ಲ್ಯೂ - 01 |
| ವಯಸ್ಸು | : 35 ವರ್ಷ | |
| ಉದ್ಯೋಗ | : ಖಾಸಗಿ ನೌಕರಿ | ಪ್ರಮಾಣ ವಚನ ಬೋಧಿಸಲಾಯಿತು ದಿನಾಂಕ 04.05.2026. |
| ವಾಸ ಸ್ಥಳ | : ನಿಟ್ಟೂರು ಗ್ರಾಮ | |

ಮುಖ್ಯ ವಿಚಾರಣೆ ಃ- ಶ್ರೀ ಹೆಚ್ ಪಿ ಎನ್ ವಕೀಲರಿಂದ ಆರೋಪಿಯ ಪರವಾಗಿ

ಕಾವ್ಯ ಧನ್ ರಾಜ್ ನಾಯಕ್ ರವರು ಅಂದಾಜು 2025ರಲ್ಲಿ ದೂರುದಾರರ ಸಹಕಾರ ಸಂಘದಲ್ಲಿ ರೂ.6ಲಕ್ಷ ಹಣವನ್ನು ಸಾಲವಾಗಿ ಪಡೆದಿರುತ್ತಾರೆ. ಸದರಿ ಸಾಲಕ್ಕೆ ನಾನು ಜಾಮೀನುದಾರನಾಗಿರುತ್ತೇನೆ. ಆ ಸಮಯದಲ್ಲಿ ನನ್ನಿಂದ ಎರಡು ಖಾಲಿ ಚೆಕ್ಕುಗಳನ್ನು ಪಡೆದುಕೊಂಡಿರುತ್ತಾರೆ. ಸಾಲ ನೀಡುವ ಸಮಯದಲ್ಲಿಆ ರೀತಿ ಪಡೆದುಕೊಂಡಿರುತ್ತಾರೆ. ಕಾವ್ಯ ಧನ್ ರಾಜ್ ನಾಯಕ್ ರವರ ಗಂಡ ಊರಿನಲ್ಲಿಯೇ ಉದ್ಯೋಗ ಮಾಡಿಕೊಂಡು ಇದ್ದರು ಸಹ ನನ್ನ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಅವರನ್ನು ನಾನು ಪ್ರಶ್ನೆ ಮಾಡಿದಾಗ ಸಾಲವನ್ನು ಸರಿಯಾಗಿ ಮರುಪಾವತಿ ಮಾಡುತ್ತಿದ್ದೇನೆ ಎಂದು ಹೇಳಿರುತ್ತಾರೆ. ಆದರೆ ಕೆಲವು ಸಮಯದ ನಂತರ ದೂರುದಾರರ ವ್ಯವಸ್ಥಾಪಕರು ನನಗೆ ಕರೆ ಮಾಡಿ ಮೂಲ ಸಾಲಗಾರರು ಸರಿಯಾಗಿ ಸಾಲವನ್ನು ಮರುಪಾವತಿ ಮಾಡುತ್ತಿಲ್ಲ ಎಂದು ತಿಳಿಸಿರುತ್ತಾರೆ. ಆ ಸಮಯದಲ್ಲಿ ನಾನು ಮೂಲ ಸಾಲಗಾರರ ಮನೆಗೆ ಭೇಟಿ ನೀಡಿ ವಿಚಾರಿಸಿದಾಗ ಕಟ್ಟುತ್ತೇನೆ ಎಂದು ಹೇಳಿದ್ದರು ಆದರೆ ಅವರು ಸಾಲವನ್ನು ಮರುಪಾವತಿ ಮಾಡದ ಕಾರಣ ಪುನಃ ನನಗೆ ಕರೆ ಬಂದಿದ್ದು, ನಾನು ಪುನಃ ಅವರ ಮನೆಗೆ ಭೇಟಿ ನೀಡಿದಾಗ ಕಾಲವಕಾಶ ಕೇಳಿರುತ್ತಾರೆ. ಸದರಿ ವಿಚಾರವನ್ನುದೂರುದಾರರಿಗೆ ತಿಳಿಸಿದ್ದು ನಾನು ಯಾವುದೇ ಸಾಲವನ್ನು ಪಡೆದಿಲ್ಲ ಹಾಗಾಗಿ ನನ್ನನ್ನು ಖುಲಾಸೆಗೊಳಿಸಬೇಕೆಂದು ಕೋರಿಕೊಳ್ಳುತ್ತಿದ್ದೇನೆ.

ಪಾಟಿ ಸವಾಲಿಗೆ ಕಾಲಾವಶಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು
ಮಾಡಿಸಲಾಯಿತು.)

ಓ.ಹೇ.ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ